ANNEXURE-II

STATEMENT SHOWING LIST OF DESILTING WORKS TAKEN UP IN HEGGADEVANAKOTE TALUK

Sl. No.	Name of the work	Cost of works as per actuals	Remarks
1	Removing silt on Megaluve channel	14,675	Work completed and bills to be paid
2	-do- Chottanahalla	1,000	-do-
3	-do-R.B.C. of Gowdanakatte tank	2,800	-do-
4	-do-R.B.C. of K.M. Hally tank	7,500	-do-
5	-do-Chikkerayur Feeder Channal	8,000	-do-
6	-do-Sulekatte pickup LBC 7 to 10 Kms	10,226	-do-
7	-do-Sulekatte pickup LBC 0 to 7 Kms	7,564	-do-
8	-do-Vodavinakatte pickup channel	8,100	-do-
9	-do-Vodavinakatte tank channel	13,980	-do-
10	-do-in LBC of Sulekatte pickup from 10 to 13 Kms	10,583	-do-
		84,428	

ಮೈಸೂರು ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳ ಬಗ್ಗೆ,

ಳಜ್ಞಿ. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ) — ಸಾರ್ವಜನಿಕ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳೆಷ್ಟು ? ತಾಲ್ಲೂಕು ವಿವರ ನೀಡುವುದು.

ಆ) ಈ ಬಾಬ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಂದ ನಡೆಸಲ್ಪಡುತ್ತಿರುವ ನ್ಯಾಯಬೆಲೆ ಅಂಗಡಿಗಳೆಷ್ಟು ? ಆ ಪೈಕಿ ವಿವಿಧ ಕಾರಣಗಳಿಗಾಗಿ ಲೈಸೆನ್ಸ್ ರದ್ದು ಪಡಿಸಲಾಗಿರುವ ನ್ಯಾಯಬೆಲೆ ಅಂಗಡಿಗಳೆಷ್ಟು ?

ಇ) ಯಾವ ಕಾರಣಗಳಿಗಾಗಿ ರದ್ದುಪಡಿಸಲಾಗಿದೆ ಎಂಬುದನ್ನು ತಾಲ್ಲೂಕುವಾರು ವಿವರ ನೀಡುವುದು. ?

ಈ) ರದ್ದುಪಡಿಸಿ ಪುನರ್ ಪರಿಶೀಲನೆ ನಂತರ ಮತ್ತೆ ಲೈಸೆನ್ಸ್ ನೀಡಿರುವ ಅಂಗಡಿಗಳೆಷ್ಟು ?

ಉ) ನ್ಯಾಯಬೆಲೆ ಅಂಗಡಿ ತೆರೆಯಲು ಬಂದಿರುವ ಅರ್ಜಿಗಳೆಷ್ಟು ? ಹಾಗೂ ಈ ಬಗ್ಗೆ ಹಾಕಿಕೊಂಡಿರುವ ಕ್ರಮವೇನು ?

ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್(ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).— ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು ೧೧೩೩ ನ್ಯಾಯಬೆಲೆ ಅಂಗಡಿಗಳು ಇರುತ್ತದೆ. ತಾಲ್ಲೂಕ್‌ವಾರು ವಿವರ ಅನುಬಂಧ–೧ರಲ್ಲಿ ಲಗತ್ತಿಸಲಾಗಿದೆ.

ಆ) ೬೮ ನ್ಯಾಯಬೆಲೆ ಅಂಗಡಿಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ನಡೆಸುತ್ತಿದ್ದಾರೆ. ಈ ಪೈಕಿ ನಾಲ್ಕು ನ್ಯಾಯಬೆಲೆ ಅಂಗಡಿಗಳ ಲೈಸೆನ್ಸ್‌ಗಳನ್ನು ವಿವಿಧ ಕಾರಣಗಳಿಗೆ ರದ್ದು ಪಡಿಸಲಾಗಿದೆ.

ಇ) ಈ ಬಗ್ಗೆ ತಾಲ್ಲೂಕುವಾರು ವಿವರವನ್ನು ಅನುಬಂಧ ೨ರಲ್ಲಿ ತೋರಿಸಲಾಗಿದೆ.

ಈ) ಅಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ.

ಉ) ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ೩೩ ಅರ್ಜಿಗಳು ನ್ಯಾಯಬೆಲೆ ಅಂಗಡಿಗಳ ಮಂಜೂರಾತಿಗೆ ಸಲ್ಲಿಸಿದ್ದಾರೆ. ಈಗಾಗಲೇ ಜಿಲ್ಲೆಯಲ್ಲಿ ೧೧೩೩ ನ್ಯಾಯಬೆಲೆ ಅಂಗಡಿಗಳು ಕೆಲಸ ಮಾಡುತ್ತಿರುತ್ತವೆ. ಅವಶ್ಯಕತೆ ಇದ್ದ ಕಡೆ ಸರ್ಕಾರದ ಕಾನೂನಿನಂತೆ ಹೆಚ್ಚಿನ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಪರಿಶೀಲಿಸಿ ಆ ರೀತಿ ತೆರೆಯುವ ಸಂದರ್ಭದಲ್ಲಿ ಈ ಹೊಸ ಅರ್ಜಿಗಳಲ್ಲಿರುವವರನ್ನು ನೇಮಕ ಮಾಡಲು ಪರಿಶೀಲಿಸಲಾಗುತ್ತದೆ, ಅಲ್ಲದೆ ಈಗ ಹಾಲಿ ನಡೆಸುತ್ತಿರುವ ನ್ಯಾಯಬೆಲೆ ಅಂಗಡಿಯವರು ಏನಾದರೂ ಲೋಪದೋಷಗಳನ್ನೆಸಗಿದರೆ ಅವರ ಮೇಲೆ ಕಾನೂನು ರೀತ್ಯ ಕ್ರಮ ತೆಗೆದುಕೊಂಡು ರದ್ದುಪಡಿಸಿದ ಮೇಲೆ ಇವುಗಳ ಸ್ಥಳದಲ್ಲಿ ಹೊಸದಾಗಿ ನೇಮಿಸುವಾಗ ಹೊಸದಾಗಿ ಅರ್ಜಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ಈಗಾಗಲೇ ೩೩ ಅರ್ಜಿಗಳ ಪೈಕಿ ಪಟ್ಟಣ ಪ್ರದೇಶದಲ್ಲಿ ೬ ಅರ್ಜಿದಾರರಿಗೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ೩ ಅರ್ಜಿದಾರರಿಗೆ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರಾತಿ ನೀಡಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಇನ್ನೊಂದು ನ್ಯಾಯಬೆಲೆ ಅಂಗಡಿಗೆ ಮಂಜೂರಾತಿ ನೀಡಲು ವಿಚಾರಣೆ ನಡೆಯುತ್ತಿದೆ.

ಅನುಬಂಧ–೧

ಮೈಸೂರು ಜಿಲ್ಲೆಯ ನಗರ : ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಒಟ್ಟು ನ್ಯಾಯಬೆಲೆ ಅಂಗಡಿಗಳ ತಾಲ್ಲೂಕುವಾರು ವಿವರಗಳು.

ಮೈಸೂರು	...	೨೬೭
ಟಿ. ನರಸೀಪುರ	...	೧೦೮
ಕೊಳ್ಳೇಗಾಲ	...	೧೦೬
ಗುಂಡ್ಲುಪೇಟೆ	...	೧೨೬
ನಂಜನಗೂಡು	...	೧೦೬
ಹುಣಸೂರು	...	೭೮
ಕೆ.ಆರ್. ನಗರ	...	೬೬
ಹೆಚ್. ಡಿ. ಕೋಟೆ	...	೮೮
ಪಿರಿಯಾಪಟ್ಟಣ	...	೬೮
ಯಳಂದೂರು	...	೨೭
ಚಾಮರಾಜನಗರ	...	೧೧೭
		೧೧೩೩

ಅನುಬಂಧ-೨

ಮೈಸೂರು ಜಿಲ್ಲೆಯಲ್ಲಿ ರದ್ದುಗೊಳಿಸಿರುವ ನ್ಯಾಯಬೆಲೆ ಅಂಗಡಿಗಳ ತಾಲ್ಲೂಕುವಾರು ವಿವರ.

1. ಮೈಸೂರು ತಾಲ್ಲೂಕು

ನಿಂದುವಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕರಾದ ಶ್ರೀ ಈರಯ್ಯ ಎಂಬುವವರು ೧ ವರ್ಷದಲ್ಲಿ ಮೂರು ಸಾರಿ ಮಾತ್ರ ಪಡಿತರ ಆಹಾರ ಪದಾರ್ಥಗಳನ್ನು ಕಾರ್ಡುದಾರರಿಗೆ ಮಾರಾಟ ಮಾಡಿರುವುದು : ಪಡಿತರ ಆಹಾರ ಪದಾರ್ಥಗಳನ್ನು ಅಕ್ರಮವಾಗಿ ಮಾರಾಟ ಮಾಡಿ ದುರುಪಯೋಗ ಮಾಡಿಕೊಂಡಿರುವುದು. ನಿಯಂತ್ರಿತ ಬೆಲೆಗಳಿಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿರುವುದು, ಲೆಕ್ಕ ಪತ್ರಗಳನ್ನು ಇಡದಿರುವುದು, ಈ ಕಾರಣಗಳಿಂದ ರದ್ದುಗೊಳಿಸಲಾಗಿದೆ.

2. ಕೊಳ್ಳೇಗಾಲ ತಾಲ್ಲೂಕು

ಮಧುವನಹಳ್ಳಿ ಗ್ರಾಮದ ಶ್ರೀ ಕೆ. ಜಿ. ಮಹದೇವ ಎಂಬುವವರು ಕಾರ್ಡುದಾರರಿಗೆ ವಿತರಣೆ ಮಾಡಬೇಕಾದ ಗೋಧಿಯನ್ನು (ಅದೇ ಗ್ರಾಮದ ಇನ್ನೊಬ್ಬ ನ್ಯಾಯಬೆಲೆ ಅಂಗಡಿ ಮಾಲೀಕರಾದ ಶ್ರೀ ನಂಜುಂಡಸ್ವಾಮಿ ಎಂಬುವವರ ಜೊತೆ ಶಾಮಿಲಾಗಿ ಒಟ್ಟು ೭೦ ಮೂಟೆಗಳನ್ನು) ಕಾಳಸಂತೆ ಯಲ್ಲಿ ಮಾರಾಟ ಮಾಡಲು ಸಾಗಿಸುತ್ತಿದ್ದಾಗ ಕೊಳ್ಳೇಗಾಲ ತಹಸೀಲ್ದಾರ್‌ರವರಿಗೆ ಸಿಕ್ಕಿಬಿದ್ದು, ಇದರ ಬಗ್ಗೆ ಮೈಸೂರು ಜಿಲ್ಲಾಧಿಕಾರಿಯವರ ಕೋರ್ಟಿನಲ್ಲಿ ಪ್ರಕರಣ ದಾಖಲು ಆಗಿ ಎರಡು ನ್ಯಾಯಬೆಲೆ ಅಂಗಡಿಗಳ ಚಿಲ್ಲರೆ ಮಾರಾಟ ಪರವಾನಿಗೆಯನ್ನು ವಿಚಾರಣೆ ನಂತರ ರದ್ದುಗೊಳಿಸಿರುವುದರಿಂದ ಈ ಕಛೇರಿಯಲ್ಲಿ ಶ್ರೀ ಕೆ. ಜಿ. ಮಹದೇವು ಮತ್ತು ನಂಜುಂಡಸ್ವಾಮಿ ಇವರುಗಳ ಅನುಮತಿ ಪತ್ರಗಳನ್ನು ರದ್ದುಗೊಳಿಸಲಾಗಿದೆ.

3. ಚಾಮರಾಜನಗರ ತಾಲ್ಲೂಕು

ಬಾಗಲಿ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕರಾದ ಶ್ರೀ ಎಂ. ಚಿಕ್ಕಮಾದಯ್ಯ ಎಂಬುವರು ಪಡಿತರ ಸಾಮಗ್ರಿಗಳನ್ನು ಸಮರ್ಪಕವಾಗಿ ಎತ್ತುವಳಿ ಮಾಡದಿರುವುದು, ನಿಯಂತ್ರಿತ ಬೆಲೆ ಮತ್ತು ನಿಗಧಿತ ಪ್ರಮಾಣದಲ್ಲಿ ವಿತರಣೆ ಮಾಡದಿರುವುದು, ಈ ಆರೋಪಗಳ ಬಗ್ಗೆ ಬಂದ ಗ್ರಾಮಸ್ಥರ ದೂರು ಅರ್ಜಿಯ ಬಗ್ಗೆ ಚಾಮರಾಜನಗರ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರಿಂದ ವಿಚಾರಣೆ ನಡೆಸಿ, ಆರೋಪ ಗಳು ಸಾಬೀತು ಆಗಿರುವುದರಿಂದ, ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಈ ಕಾರ್ಯಾಲಯದಿಂದ ಕಾರಣ ಕೇಳುವ ನೋಟೀಸನ್ನು ನೀಡಿ, ಅವಕಾಶ ನೀಡಿ ನಂತರ ರದ್ದುಗೊಳಿಸಲಾಗಿದೆ.

4. ಹೆಚ್. ಡಿ. ಕೋಟೆ ತಾಲ್ಲೂಕು

ಬಾಚೇಗೌಡನಹಳ್ಳಿಕ್ಷಿ ಗ್ರಾಮದ ನ್ಯಾಯಬೆಲೆ ಅಂಗಡಿಯ ಮಾಲೀಕರಾದ ಶ್ರೀ ಎನ್. ಮಾದಯ್ಯ ನವರು ೯೫ ಕೆ.ಜಿ. ಪಡಿತರ ಅಕ್ಕಿಯನ್ನು ಹಲವಾರು ಕಾರ್ಡುದಾರರಿಗೆ ವಿತರಣೆ ಮಾಡುವ ಪದಾರ್ಥ ವನ್ನು ಒಬ್ಬ ಇಬ್ಬರಿಗೆ ಅಕ್ರಮ ಮಾರಾಟ ಮಾಡಿರುತ್ತಾರೆ. ಇದರ ಬಗ್ಗೆ ಗ್ರಾಮದಲ್ಲಿ ವಿಚಾರಣೆ ನಡೆಸಿ ಗ್ರಾಮಸ್ಥರು ಒಪ್ಪಿಕೊಂಡಿರುತ್ತಾರೆ. ಈ ಕಛೇರಿಯಲ್ಲಿಯೂ ಮೌಕ್ಕ ವಿಚಾರಣೆ ನಡೆಸಿದಾಗ ಸಾಕ್ಷಿದಾರರ ಮುಂದೆ ಸದರಿ ನ್ಯಾಯಬೆಲೆ ಅಂಗಡಿ ಮಾಲೀಕರು ಅವರು ಮಾಡಿರುವ ಅಕ್ರಮ ಒಪ್ಪಿ ಕೊಂಡಿರುವುದರಿಂದ ಅನುಮತಿ ಪತ್ರವನ್ನು ರದ್ದುಗೊಳಿಸಲಾಗಿದೆ.

ಡಾ. ಮಹಿಷಿ ಸಮಿತಿ ವರದಿ.

೩೧೧. ಶ್ರೀ ಬಿ. ಲಕ್ಕಪ್ಪ(ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ನೀಡುವ ಬಗ್ಗೆ ಅಧ್ಯಯನ ನಡೆಸಲು ನೇಮಿಸ ಲಾಗಿದ್ದ ಡಾ. ಸರೋಜಿನಿ ಮಹಿಷಿ ಸಮಿತಿಯು ಸರಕಾರಕ್ಕೆ ವರದಿಯನ್ನು ಸಲ್ಲಿಸಿದೆಯೇ ? ಸಲ್ಲಿಸಿದ್ದಲ್ಲಿ ಎಂದು ಸಲ್ಲಿಸಲಾಗಿದೆ ?

ಆ) ಸದರಿ ಸಮಿತಿಯ ಶಿಫಾರಸುಗಳೇನು ?

ಇ) ಡಾ. ಮಹಿಷಿ ಸಮಿತಿಯ ವರದಿಯನ್ನು ಸರಕಾರದವರು ಒಪ್ಪಿಕೊಂಡಿದ್ದಾರೆಯೇ ?